**ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಕಾಡುಮಲ್ಲೇಶ್ವರ ವಾರ್ಡ್–65ರಲ್ಲಿ ಆನ್‌ಲೈನ್ (Zoom App) ಮೂಲಕ ದಿನಾಂಕ: 04–12–2021 ರಂದು, ನಡೆದ ವಾರ್ಡ್ ಸಮಿತಿ ಸಭೆಯ**

**ಸಭಾ ನಡವಳಿಗಳು.**

**ವಾರ್ಡ್ ಸಂಖ್ಯೆ–65 ಕಾಡುಮಲ್ಲೇಶ್ವರ** **ಸಮಯ ಬೆಳಿಗ್ಗೆ 11:00 ಘಂಟೆಗೆ**

ದಿನಾಂಕ: 04–12–2021 ರಂದು ವಾರ್ಡ್ ಸಂಖ್ಯೆ:65ರ ಡಿಸೆಂಬರ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಆನ್‌ಲೈನ್ (Zoom App) ಮೂಲಕ ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 65ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದು ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆ ನಡೆಸಲು ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಆರೋಗ್ಯ ವೈದ್ಯಾಧಿಕಾರಿ (ಮಲ್ಲೇಶ್ವರಂ) ರವರಾದ ಡಾ// ಲಾವಣ್ಯ ರವರು ಸಭೆಯಲ್ಲಿ ಹಾಜರಿದ್ದು. ಕೋವಿಡ್–19 ವ್ಯಾಕ್ಸಿನೇಶನ್ ಬಗ್ಗೆ ಮನೆ ಮನೆಗೆ ವ್ಯಾಕ್ಸಿನೇಶನ್ ನೀಡುತ್ತಿದ್ದು, ಕೋವಿಡ್–19ರ ನಿಯಮಗಳನ್ನು ಪಾಲಿಸಬೇಕೆಂದು ಹಾಗೂ ವಿದೇಶಿ ಪ್ರಯಾಣಿಕರ ಮಾಹಿತಿಯನ್ನು ಕಲೆಹಾಕುತ್ತಿರುವುದನ್ನು ಸಭೆಗೆ ತಿಳಿಸಿರುತ್ತಾರೆ.
- ಎಸ್.ಡಬ್ಲ್ಯೂ.ಡಿ ಇಲಾಖೆಯ ಸಹಾಯಕ ಅಭಿಯಂತರರಾದ ಶ್ರೀಮತಿ ಇಂದ್ರಾಣಿ ರವರು ಸಭೆಯಲ್ಲಿ ಹಾಜರಿದ್ದು. ಕಛೇರಿಯ ಕಾಮಗಾರಿಗಳ ಬಗ್ಗೆ ವಿರಣೆಯನ್ನು ನೀಡಿರುತ್ತಾರೆ.
- ಆರೋಗ್ಯ ಇಲಾಖೆಯ ಶ್ರೀಮತಿ ರೇಖಾ ರವರು ಸಭೆಯಲ್ಲಿ ಹಾಜರಿದ್ದು, ಸಾರ್ವಜನಿಕರು ಕೇಳಿದ್ದ ಕಸ ವಿಂಗಡಣೆ ಮಾಡಿ ಹಸಿ ಮತ್ತು ಒಣ ಕಸವನ್ನು ವಾರದ ಯಾವ ದಿನಗಳಲ್ಲಿ ತೆಗೆಯುವುದಾಗಿ ಕೇಳಿರುತ್ತಾರೆ.
- ಸಂಚಾರಿ ಪೊಲೀಸ್ ಇಲಾಖೆಯಿಂದ ಸಂಚಾರಿ ಇನ್ಸ್‌ಪೆಕ್ಟರ್ ರವರು ಸಭೆಯಲ್ಲಿ ಹಾಜರಿದ್ದು, ರಸ್ತೆಯ ಎರಡು ಬದಿಗಳಲ್ಲಿ ನಿಲ್ಲಿಸಿರುವ ಗಾಡಿಗಳಲ್ಲಿಂದ 9ನೇ ಅಡ್ಡರಸ್ತೆಯಲ್ಲಿ 5&6ನೇ ಮುಖ್ಯರಸ್ತೆಗಳ ಮಧ್ಯೆ ನಿಲ್ಲಿರುವ ವಾಹನಗಳಿಂದ ಪಾದಚಾರಿ ಮಾರ್ಗಗಳಲ್ಲಿ ಸಂಚಾರಿಸಲು ಸಾಧ್ಯವಿರುವುದಿಲ್ಲ. ಹಾಗೂ 6ನೇ ಅಡ್ಡರಸ್ತೆ ಎಸ್‌ಎಸ್‌ಎಲ್‌ಸಿ ಬೋರ್ಡ್ ಮುಂಭಾಗ ನಿಲ್ಲಿಸಿರುವ ವಾಹನಗಳನ್ನು ತೆರವುಗೊಳಿಸುವಂತೆ ಸಾರ್ವಜನಿಕರು ಕೋರಿರುತ್ತಾರೆ.

Scanned with CamScanner

- ಬೆಸ್ಕಾಂ ಇಲಾಖೆಯವರಾದ ಶ್ರೀ ಮಂಜುನಾಥ್ ರವರು ಸಭೆಯಲ್ಲಿ ಹಾಜರಿದ್ದು, ಯುಜಿ ಕೇಬಲ್‌ಗಳು 15 ದವಸಗಳೊಳಗೆ ಮುಗಿಸಿಕೊಡುವುದಾಗಿ ಸಭೆಗೆ ತಿಳಿಸಿರುತ್ತಾರೆ.

- ಅರಣ್ಯ ಇಲಾಖೆಯ ಶ್ರೀ ಮೂರ್ತಿ ರವರು ಹಾಜರಿದ್ದು, ಬೀದಿದೀಪಗಳಿಗೆ ತಡೆಹೊಡ್ಡಿರುವ ಮರದ ರಂಬೆಗಳನ್ನು ತ್ವರಿತವಾಗಿ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

- ಟೆಂಡರ್ ಶ್ಯೂರ್ ಇಲಾಖೆಯ ವತಿಯಿಂದ ಹಾಜರಿದ್ದ ಎಇಇ ನಾಗರಾಜು ರವರು ಮಾರ್ಗೋಸಾ ರಸ್ತೆಗೆ ಮಾರ್ಕಿಂಗ್, ಜೀಬ್ರಾ ಕ್ರಾಸಿಂಗ್, ಸ್ಪೀಟ್ ಬ್ರೇಕ್ ಅಳವಡಿಸಲು ಈ ತಿಂಗಳ ಒಳಗಾಗಿ ಕೈಗೊಳ್ಳಲು ಹಾಗೂ 2 ವರ್ಷ ವ್ಯಾರೆಂಟಿ ಅವಧಿ ಇರುವುದಾಗಿ ಹಾಗೂ ಮಳೆಯಿಂದ ಕುಸಿದಿರುವ ಪಾದಚಾರಿ ಮಾರ್ಗದಲ್ಲಿನ ಟೈಲ್ಸ್‌ಗಳನ್ನು ಸರಿಪಡಿಸುವುದಾಗಿ ಸಭೆಯಲ್ಲಿ ತಿಳಿಸಲಾಯಿತು.

- ಬೀದಿದೀಪ ಇಲಾಖೆಯಿಂದ ಶ್ರೀ ವಿನಯ್‌ಕುಮಾರ್ ಹಾಜರಿದ್ದು 15ನೇ ಅಡ್ಡರಸ್ತೆಯಿಂದ ಮಾರುತಿ ಶೋರೋಂ ವರೆಗೂ, 4ನೇ ಮುಖ್ಯರಸ್ತೆ 9ನೇ ಅಡ್ಡರಸ್ತೆಗಳಲ್ಲಿ ಬೀದಿದೀಪಗಳನ್ನು ಅಳವಡಿಸಲು ಸಭೆಯಲ್ಲಿ ತಿಳಿಸಲಾಯಿತು.

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ,

Vaim 4/12/21

ಸಹಾಯಕ ಅಭಿಯಂತರರು, ವಾರ್ಡ್-65
ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ

Scanned with CamScanner